ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಫಿಬ್ರವರಿ ತಾ|| 8, ಸನ್ 1890.

ಸೂಚನೆ ಈ ಭಾಗವನ್ನು ಪ್ರತ್ಯೇಕ ಕೆರಿಸಿ ಇಡುವ ಬಗ್ಯೆ ಇದಕ್ಕೆ ಜೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫೈನ್ಯಾನ್ಸಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಜರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರ ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಜರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟ್ಪವುಳ್ಳ ಜನಗಳ ತಮ್ಮ ಡಿಬೆಂಜರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಪರಾ ಬಗ್ಯೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಟಿಕೇಟಾದ ಡಿಮಾಂಡ್ ಡ್ರಾಫ್‌ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇನ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಫಾರೆಸ್ಟ್ ಇಲಾಖಾ.

ತಾರೀಖು 21ನೇ ಜನವರೀ ಸನ್ 1890.

ಇದರಿಂದ ತಿಳಿಯಪಡಿಸುವದೇನಂದರೆ, ಜನಗಳ ಅನುಕೂಲಕ್ಕೋಸ್ಕರ ರೈಲ್ವೇ ಸ್ಟೇಷನ್ ಇರುವ ಬೀರೂರಿನಲ್ಲಿ ಒಂದು ನಾಟುಗಳ ಡಿಪೋ ಸ್ಥಾಪಿಸಲ್ಪಟ್ಟು ಇಧೆ. ಅಲ್ಲಿ ನಾನಾ ತರಹಗಳ ನಾಟೂ ಮತ್ತು ಬೊಂಬುಗಳು ಚಿಲ್ಲರೆ ದರಕ್ಕೆ ಮಾರಲ್ಪಡುವದು.

ತಾರೀಖು 22ನೇ ಜನವರಿ 1890ನೇ ಇಸವಿ.

ಸನ್ 1878ನೇ ಇಸವಿ ಜೂನ್ 8ನೇ ಮರ್ತುಮಿನ ಫಾರೆಸ್ಟ್ ರೂಲ್ಸ್ 13ನೇ ನಿಬಂಧನೆಗಳನ್ನನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಾದ ಬೆಂಕಿಯಿಂದ ಕಪಾಡಲ್ಪಟ್ಟ ಬೆಂಗಳೂರು ಡಿಸ್ಟ್ರಿಕ್ಟ್ ಸರಕಾರಿ ಜಂಗಲಿಗಳನ್ನು ಮತ್ತು ಪ್ಲಾಂಟೇಷನ್‌ಗಳನ್ನು ಪಿಕಾರಿಗಳಿಗೂ ಅಂಬುಗಾರ್ರು, ಯಾ ಬ್ಯಾಟೆಗಾರ್ರಿಗೂ ಬಂದ್ ಮಾಡಲ್ಪಟ್ಟು ಯಿರುತ್ತೆ. ಯಾವ ಮನುಷ್ಯ ಅಥವಾ ಮನುಷ್ಯರುಗಳಾಗಲಿ ಇಚಾರ್ಜ್ ಫಾರೆಸ್ಟ್ ಆಫಿಸರು ಯಾ ಅಮಲ್‌ದಾರ್ರವರ ಲಿಖಿತ ಮೂಲಕ ಅಪ್ಪಣೆ ಹೊರತಾಯಿ ಐಜ್ ಜಂಗ್ಲಿಗಳಲ್ಲು ಮತ್ತು ಪ್ಲಾಂಟೇಷನ್‌ಗಳಲ್ಲು ಮೇಲ್ಕಂಡ ಬ್ಯಾಟೆ ವಗ್ಯೆರೆ ಬಗ್ಯೆ ಪ್ರವೇಶ ಮಾಡಕೂಡದು.